# IN THE COURT OF THE ADDL. SENIOR CIVIL JUDGE & JMFC., GUBBI
# **OS – 65/2016**

Witness present and duly sworn on : 08.01.2025.

Cross Examination: by Counsel for defendant No.20, 26 to 29, 41, 43, 44, 46.:

ನಾನು ಗುಬ್ಬಿಯ ಸಿವಿಲ್ ನ್ಯಾಯಾಲಯದಲ್ಲಿ OS No.240/2013 ದಾವೆಯನ್ನು ಸಲ್ಲಿಸಿದ್ದೇನು ಎಂದರೆ ಸರಿ. ನನ್ನ ಗಂಡನ ಹೆಸರು ರಾಮಣ್ಣ. ನನ್ನ ಮಾವನ ಹೆಸರು ಮುದ್ದಯ್ಯ. ನನ್ನ ಗಂಡ ತೀರಿಕೊಂಡು ಸುಮಾರು 15 ವರ್ಷಗಳಾಗಿವೆ. ನನ್ನ ಅತ್ತೆ ಲಕ್ಕಮ್ಮ. ನಾನು, ನನ್ನ ಅತ್ತೆ ಮತ್ತು ಮೈದುನ ರ ವಿರುದ್ಧ ದಾವೆ ಸಲ್ಲಿಸಿದ್ದೇನೆಂದರೆ ಸರಿ. 2013 ರಲ್ಲಿ ದಾವೆ ಸಲ್ಲಿಸುವಾಗ ಸುಮಾರು 5 ಆಸ್ತಿಗಳನ್ನು ಸೇರಿಸಿದ್ದೇನು ಎಂದರೆ ಸರಿ. ಸದರಿ ದಾವೆಯಲ್ಲಿ ನನ್ನ ವಿಚಾರಣೆ ಆಗಿತ್ತು ಎಂದರೆ ಸರಿ.

ಮುದ್ದಯನವರ ತಂದೆಯ ಹೆಸರು ದೊಡ್ಡಯ್ಯ ಎಂದರೆ ಸರಿ. ದೊಡ್ಡಯ್ಯರವರ ತಂದೆಯ ಹೆಸರು ಚಿಕ್ಕೇರಿ ಸಂಜೀವಯ್ಯ ಎಂದರೆ ಸರಿ. ನನ್ನ ಮಾವ ಮುದ್ದಯ್ಯನವರ ತಂದೆಗೆ 4 ಜನ ಗಂಡು ಮಕ್ಕಳು ಎಂದರೆ ಸರಿ. ಅವರುಗಳು ಭೀಮಯ್ಯ, ದೊಡ್ಡಯ್ಯ, ಚಿಕ್ಕಣ್ಣ ಮತ್ತು ಹನುಮಂತಯ್ಯ ಎಂದರೆ ಸರಿ. ಅವರುಗಳು ಒಟ್ಟು ಕುಟುಂಬದ ಆಸಿತಯನ್ನು ನೊಂದಣಿ ವಿಭಾಗ ಪತ್ರದ ಅಡಿಯಲ್ಲಿ ದಿನಾಂಕಃ 04.04.1952 ರಲ್ಲಿ ವಿಭಾಗ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಸದರಿ ವಿಭಾಗದಂತೆ ಅವರುಗಳು ಆಸ್ತಿಗಳನ್ನು ಬೇರೆ ಬೇರೆಯಾಗಿ ಅನುಭವಿಸಿಕೊಂಡು ಬರುತ್ತಿದ್ದರು ಎಂದರೆ ಸರಿಯಲ್ಲ.

ಸದರಿ ಮುದ್ದಯ್ಯನವರಿಗೆ 4 ಜನ ಮಕ್ಕಳು ಅವರುಗಳು ಭೀಮಯ್ಯ, ದೊಡ್ಡರಾಮಯ್ಯ, ಮುದ್ದಯ್ಯ ಮತ್ತು ಹನುಮಂತಯ್ಯ. ನಾನು ಹಾಕಿರುವ ದಾವೆಯಲ್ಲಿ ವಿಭಾಗ ಮಾಡಿಕೊಂಡಿರುವ ಬಗ್ಗೆ ಬರೆಸಿದ್ದೇನೆಂದರೆ ಸರಿಯಲ್ಲ. ದೊಡ್ಡಯ್ಯನವರ ಮಕ್ಕಳು 1990 ರಲ್ಲಿ ವಿಭಾಗ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. 1952 ರಲ್ಲಿ ಚಿಕ್ಕೇರಿ ಸಂಜೀವಯ್ಯ ನವರ ಮಕ್ಕಳು ವಿಭಾಗ ಮಾಡಿಕೊಂಡಿದ್ದು, ಅದರಂತೆ ಆಸ್ತಿಗಳು ಬೇರೆ

ಬೇರೆಯಾಗಿವೆ ಎಂದರೆ ಸರಿ. ಹನುಮಂತಯ್ಯನವರಿಗೆ ಬಂದಿದ್ದ ಆಸ್ತಿಯನ್ನು ಅವರ ಮಕ್ಕಳಾದ ಈ ದಾವೆಯ 42 ರಿಂದ 46 ನೇ ಪ್ರತಿವಾದಿಗಳು ಅನುಭವಿಸಿಕೊಂಡು ಬರುತ್ತಿದ್ದಾರೆಂದರೆ ನನಗೆ ಗೊತ್ತಿಲ್ಲ.

ಈ ದಾವೆಯನ್ನು ಎಷ್ಟು ಆಸ್ತಿಗಳಿಗೆ ಸಲ್ಲಿಸಿದ್ದಾರೆಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳು ಈಗಾಗಲೇ ವಿಭಾಗ ಮಾಡಿಕೊಂಡಿದ್ದು, ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಾನು ಗುಬ್ಬಿಯ ಸಿವಿಲ್ ನ್ಯಾಯಾಲಯದಲ್ಲಿ OS No.240/2013 ದಾವೆಯನ್ನು ನನ್ನ ಗಂಡನ ಪಾಲಿಗೆ ಬರುವ ಆಸ್ತಿಯ ವಿಭಾಗ ಕೇಳಿದ್ದೇನೆಂದರೆ ಸರಿ. ಈ ದಾವೆಯಲ್ಲಿ ವಾದಿಯು ಬರೆಸಿರುವ ವಾದ ಪತ್ರದ ಬಗ್ಗೆ ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ವಾದಿಯು 1952 ರಲ್ಲಿ ಚಿಕ್ಕೇರಿ ಸಂಜೀವಯ್ಯನ ಮಕ್ಕಳು ವಿಭಾಗ ಮಾಡಿಕೊಂಡಿರುವ ಬಗ್ಗೆ ಬರೆಸಿದ್ದಾರೆಂದರೆ ನನಗೆ ಗೊತ್ತಿಲ್ಲ. ಈಗಾಗಲೇ ವಿಭಾಗ ಆಗಿರುವ ಕಾರಣ ನನ್ನ ಮಾವ ಮತ್ತು ಗಂಡನಿಗೆ ದಾವಾ ಆಸ್ತಿಗಳಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಾನು ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

Cross Examination: by Counsel for plaintiff:

Deferred as counsel prays time.

(Typed to my dictation in open court)

R.O.I & A.C.

Addl. Senior Civil Judge and
JMFC., Gubbi